ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯಃ ನ.ರಾ.ಪುರ

ಸಿ. ಸಿ. ನಂ. **378/2020**

ಫಿರ್ಯಾದುದಾರರು : ಸರ್ಕಾರದ ಪರವಾಗಿ ನ.ರಾ.ಪುರ ಪೊಲೀಸರು

:ವಿ:

ಆರೋಪಿತರುಃ :

1. ಜೀವನ್ ಅಲಿಯಾಸ್ ಜೀವನ್ ಕುಮಾರ್ ಬಿ., ಬಿನ್. ಬಸವರಾಜು, 21 ವರ್ಷ, ಡ್ರೈವಿಂಗ್ ಕೆಲಸ, ವಾಸಃ ಸುಗ್ಗಪ್ಪನಮಠ, ಹಿಳುವಳ್ಳಿ ಗ್ರಾಮ, ನ.ರಾ.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
2. ಸಂದೀಪ, ಬಿನ್. ಬಸವರಾಜು, 23 ವರ್ಷ, ಡ್ರೈವಿಂಗ್ ಕೆಲಸ, ವಾಸಃ ಸುಗ್ಗಪ್ಪನಮಠ, ಹಿಳುವಳ್ಳಿ ಗ್ರಾಮ, ನ.ರಾ.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
3. ಪ್ರದೀಪ ಬಿ.ಎಸ್., ಬಿನ್. ಬಸವರಾಜು, 24 ವರ್ಷ, ಡ್ರೈವಿಂಗ್ ಕೆಲಸ, ವಾಸಃ ಸುಗ್ಗಪ್ಪನಮಠ, ಹಿಳುವಳ್ಳಿ ಗ್ರಾಮ, ನ.ರಾ.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
4. ರಾಕೇಶ, ಬಿನ್. ಮಂಜುನಾಥ, 23 ವರ್ಷ, ವಾಸಃ ಸುಗ್ಗಪ್ಪನಮಠ, ಹಿಳುವಳ್ಳಿ ಗ್ರಾಮ, ನ.ರಾ.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
5. ಪ್ರಸನ್ನ ಕುಮಾರ, ಬಿನ್.ಗೋವಿಂದಪ್ಪ, 20 ವರ್ಷ, ಚಾಲಕ, ವಾಸಃ ರಾಜೀವ್ ನಗರ, ಸಿ ನ.ರಾ.ಪುರ ಪಟ್ಟಣ, ನ.ರಾ.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

-----

ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ ***313***ರ ಪ್ರಕಾರ ಆರೋಪಿ ಹೇಳಿಕೆ

ಪ್ರಃ1: ಅಭಿಯೋಜನೆಯ ಪರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉಃಆಃ1:
ಆಃ2:
ಆಃ3:
ಆಃ4:
ಆಃ5:

ಪ್ರಃ2: ಪ್ರಾ ಸಾ - 1 ಶರತ್ ಕೆ.ವಿ., ಅರಣ್ಯ ರಕ್ಷಕ ಮತ್ತು ಪ್ರಾ ಸಾ - 2 ಭರತ್, ಅರಣ್ಯ ವೀಕ್ಷಕ, ಹೇಳುತ್ತಾರೆ, ದಿಃ 25.04.2020 ರಂದು ರಾತ್ರಿ 10.30 ಗಂಟೆಗೆ ಅವರು ರಾವೂರಿನ ನೀಲಗಿರಿ ತೋಪಿನಲ್ಲಿ ಗಸ್ತು ಮಾಡುವಾಗ ನೀವು ಆರೋಪಿ 1 ಮತ್ತು 5 ರವರು ಟ್ರಾಕ್ಟರ್ ಸಂಃ KA 18 TB 2340ನ್ನು ತೆಗೆದುಕೊಂಡು ಬಂದು ನೀಲಗಿರಿ ಮರಗಳನ್ನು ಕಡಿಯುತ್ತಿದ್ದು, ಈ ಬಗ್ಗೆ ಅವರು ಕೇಳಿದಾಗ, ನೀವು ಆರೋಪಿತರು ನೀನು ಯಾರು ಕೇಳಲು ಎಂದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಅವರ ಕರ್ತವ್ಯಕ್ಕೆ ಅಡ್ಡಿ ಪಡಿಸಿ ಹಲ್ಲೆ ಮಾಡಲು ಬಂದಿರುತ್ತೀರಿ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3: ಸುಳ್ಳು
ಆಃ4:
ಆಃ5:

ಪ್ರಃ3: ಅವರು ಮುಂದುವರಿದು ಹೇಳುತ್ತಾರೆ, ನಂತರ ಅದೇ ದಿನ ರಾತ್ರಿ 11 ಗಂಟೆ ಸಮಯದಲ್ಲಿ ನೀವು ಆರೋಪಿತರು ಅವರ ಮನೆ ಬಳಿ ಬಂದು ಅವರ ಮನೆಯ ಒಳಗೆ ನುಗಿ ಅವರನ್ನು ಎಳೆದುಕೊಂಡು ಹೊರಗೆ ಬಂದು ಕೆಟ್ಟದಾಗಿ ಬೈದು ಕೈಗಳಿಂದ ಹೊಡೆದು, ಜಗಳ ಬಿಡಿಸಲು ಬಂದ ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹೊಡೆದಿರುತ್ತೀರಿ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3:
ಆಃ4: ಸುಳ್ಳು
ಆಃ5:

ಪ್ರಃ4: ಅವರು ಮುಂದುವರಿದು ಹೇಳುತ್ತಾರೆ, ನಂತರ ನೀವು ಆರೋಪಿತರು ಅವರನ್ನು ಉದ್ದೇಶಿಸಿ ನಮ್ಮ ತಂಟೆಗೆ ಬಂದರೆ ಪ್ರಾಣ ತೆಗೆಯುತ್ತೇವೆ ಎಂದು ಅವರಿಗೆ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3: ಸುಳ್ಳು
ಆಃ4:
ಆಃ5:

ಪ್ರಃ5: ಅವರು ಮುಂದುವರಿದು ಹೇಳುತ್ತಾರೆ, ಪ್ರಾಸಾ 1 ರವರು ಮುಂದುವರಿದು ಹೇಳುತ್ತಾರೆ, ನಂತರ ಅವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಮಾರನೇ ದಿನ ಠಾಣೆಗೆ ಹೋಗಿ ನಿಪಿ 1 ರಂತೆ ದೂರನ್ನು

Prasanna Kumar
ದಂ ವಿಪು

4-3 [illegible]

ನೀಡಿದ್ದು, ಅದೇ ದಿನ ಮದ್ಯಾಹ್ನ ಪೊಲೀಸರು ಘಟನಾ ಸ್ಥಳಗಳಲ್ಲಿ ನಿಪಿ 2 ಮತ್ತು 3 ರಂತೆ ಮಹಜರ್ ಮಾಡಿ ನಿಪಿ-5 ಮತ್ತು 6 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3:
ಆಃ4:
ಆಃ5:

ಪ್ರಃ6: ಪ್ರಾ ಸಾ -3 ಮುರುಗೇಶ, ಹೇಳುತ್ತಾರೆ, ದಿಃ 25.04.2020 ರಂದು ರಾತ್ರಿ 10.30 ಗಂಟೆಗೆ ಅವರು ಮತ್ತು ಚಾಸಾ-1 ಮತು 2 ರವರು ರಾಪೂರಿನ ನೀಲಗಿರಿ ತೋಪಿನಲ್ಲಿ ಗಸ್ತು ಮಾಡುವಾಗ ನೀವು ಆರೋಪಿ 1 ಮತ್ತು 5 ರವರು ಟ್ರಾಕ್ಟರ್ ಸಂಃ KA 18 TB 2340 ನ್ನು ತೆಗೆದುಕೊಂಡು ಬಂದು ನೀಲಗಿರಿ ಮರಗಳನ್ನು ಕಡಿಯುತ್ತಿದ್ದು, ಈ ಬಗ್ಗೆ ಅವರು ಕೇಳಿದಾಗ, ನೀವು ಆರೋಪಿತರು ನೀನು ಯಾರು ಕೇಳಲು ಎಂದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಅವರ ಕರ್ತವ್ಯಕ್ಕೆ ಅಡ್ಡಿ ಪಡಿಸಿ ಹಲ್ಲೆ ಮಾಡಲು ಬಂದಿರುತ್ತೀರಿ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3:
ಆಃ4:
ಆಃ5:

ಪ್ರಃ7: ಅವರು ಮುಂದುವರಿದು ಹೇಳುತ್ತಾರೆ, ನಂತರ ಅದೇ ದಿನ ರಾತ್ರಿ 11 ಗಂಟೆ ಸಮಯದಲ್ಲಿ ಚಾಸಾ-1 ರವರ ಮನೆ ಬಳಿ ಜಗಳ ಆಗುತ್ತಿದ್ದು ಶಬ್ದ ಕೇಳಿ ಅವರು ಹೋಗಿ ನೋಡಿದಾಗ ನೀವು ಆರೋಪಿತರು ಚಾಸಾ-1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು, ಹೊಡೆಯುತ್ತಿದ್ದು ಅವರು ಜಗಳ ಬಿಡಿಸಿ ಚಾಸಾ-1 ರವರನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3:
ಆಃ4:
ಆಃ5:

Prasanna kumar

ಪ್ರಃ8: ಪ್ರಾಸಾ - 4 ಶ್ರೀಮತಿ ರತಿ ಹೇಳುತ್ತಾರೆ, ದಿಃ 25.04.2020 ರಂದು ರಾತ್ರಿ 10.50 ಗಂಟೆಗೆ ಅವರ ಮಗ ಚಾಸಾ-1 ಮತು 2 ರವರು ಮನೆಗೆ ಬಂದು ಅವರು ಗಸ್ತು ಮಾಡುವಾಗ ನೀವು ಆರೋಪಿ ಜೀವನ್ ಮತ್ತು ಸಂದೀಪ್ ರವರು ರಾವೂರು ಪ್ಲಾಂಟೇಶನ್ ನಲ್ಲಿ ನೀಲಗಿರಿ ಮರಗಳನ್ನು ಕಡಿಯುತ್ತಿದ್ದು ಅವರ ಮಕ್ಕಳು ಅದನ್ನು ಪ್ರಶ್ನೆ ಮಾಡಿದಾಗ ನೀವು ಆರೋಪಿತರು ಅವರ ಬಳಿ ಜಗಳ ಮಾಡಿರುತ್ತಾರೆ ಎಂದು ವಿಷಯ ತಿಳಿಸಿದ್ದು, ನಂತರ ಅದೇ ದಿನ ರಾತ್ರಿ 11 ಗಂಟೆ ಸಮಯದಲ್ಲಿ ನೀವು ಆರೋಪಿತರು ಅವರ ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿ ಅವರ ಮಗ ಚಾಸಾ--1 ಶರತ್ ರವರನ್ನು ಕಾಂಪೌಂಡ್ ಹೊರಗಡೆ ಎಳೆದುಕೊಂಡು ಹೋಗಿ ಹೊಡೆಯುತ್ತಿದ್ದು, ಅವರು ಬಿಡಿಸಲು ಹೋದಾಗ ನೀವು 1 ನೇ ಆರೋಪಿ ಅವರಿಗೆ ಕೈಯಿಂದ ತಲೆಗೆ, ಕೈಗೆ , ಬೆನ್ನಿಗೆ ಹೊಡೆದಿದ್ದು ಚಾಸಾ-5 ರಿಂದ 7 ರವರು ಬಂದು ಜಗಳ ಬಿಡಿಸಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3: ಸುಳ್ಳು
ಆಃ4:
ಆಃ5:

ಪ್ರಃ9: ಪ್ರಾಸಾ 6 ಡಾಃ ಶ್ರೀರಂಜಿನಿ ಹೇಳುತ್ತಾರೆ, ದಿನಾಂಕಃ 25.04.2020 ರಂದು ರಾತ್ರಿ 11.35 ಗಂಟೆ ಸಮಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿ ಚಾಸಾ-1 ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು, ಅವರಿಗೆ ಚಿಕಿತ್ಸೆ ನೀಡಿ ನಿಪಿ-7 ರಂತೆ ಗಾಯದ ಪ್ರಮಾಣಪತ್ರ ನೀಡಿದ್ದು ಸದರಿ ಗಾಯಗಳು ಹಲ್ಲೆಯಿಂದ ಆಗುವ ಸಾಧ್ಯತೆ ಇರುತ್ತದೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3: ಸುಳ್ಳು
ಆಃ4:
ಆಃ5:

ಪ್ರಃ10: ಪ್ರಾಸಾ 7 ಮನೀಷ್, ಪಿಡಿಓ , ನಾಗಲಾಪುರ ಗ್ರಾಮ ಪಂಚಾಯ್ತಿ, ಹೇಳುತ್ತಾರೆ, ದಿನಾಂಕಃ 03.05.2020 ರಂದು ನ.ರಾ. ಪುರ ಪೊಲೀಸರು ಕೃತ್ಯ ನಡೆದ ಸ್ಥಳದ ದಾಖಲೆ ಕೋರಿ ಮನವಿ ಸಲ್ಲಿಸಿದ್ದು, ಈ ಸಂಬಂಧ ಅವರು ದಿನಾಂಕಃ 26.05.2020 ರಂದು ನಿಪಿ-9 ಮತ್ತು 10 ರಂತೆ ವರದಿ ಮತ್ತು ದಾಖಲೆಯನ್ನು ನೀಡಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

Prasanna kumar
ಸಂದೀಪ
ಪ್ರದೀಪ
ರಾಜೇಶ್ ಡಿ.
Jeevan B

4-3-2021

ಉಃಆಃ1:
ಆಃ2:
ಆಃ3:
ಆಃ4:
ಆಃ5:

ಪ್ರಃ11: ಪ್ರಾಸಾ 8 ಪ್ರದೀಪ್, ಆರ್.ಎಫ್.ಓ. ಹೇಳುತ್ತಾರೆ, ದಿನಾಂಕಃ 02.05.2020 ರಂದು ಚಾಸಾ-1 ರಿಂದ 3 ರವರ ಕರ್ತವ್ಯ ದೃಢೀಕರಣವನ್ನು ಕೋರಿ ಪೊಲೀಸರು ಮನವಿ ಸಲ್ಲಿಸಿದ್ದು ಈ ಸಂಬಂಧ ಅವರು ನಿಪಿ-12 ರಂತೆ ಸದರಿಯವರ ಕರ್ತವ್ಯ ದೃಢೀಕರಣವನ್ನು ನೀಡಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3:
ಆಃ4:
ಆಃ5:

ಪ್ರಃ12: ಅವರು ಮುಂದುವರಿದು ಹೇಳುತ್ತಾರೆ, ದಿನಾಂಕಃ 14.05.2020 ರಂದು ಘಟನಾ ಸ್ಥಳದ ನಕಾಶೆ, ಟೋಪೋ ಶೀಟ್, ಪ್ರಥಮ ವರ್ತಮಾನ ವರದಿಯ ಪ್ರತಿ, ನೋಟಿಫಿಕೇಶನ್ ಕೋರಿ ಮನವಿ ಸಲ್ಲಿಸಿದ್ದು, ಈ ಸಂಬಂಧ ಅವರು ನಿಪಿ-14 ರಿಂದ 17 ರಂತೆ ಟೋಪೋ ಶೀಟ್ ದೃಢೀಕೃತ ನಕಲು, ನಕಾಶೆಯ ದೃಢೀಕೃತ ನಕಲನ್ನು, ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು, ನೋಟಿಫಿಕೇಶನ್ ದೃಢೀಕೃತ ನಕಲನ್ನು ನೀಡಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3:
ಆಃ4:
ಆಃ5:

ಪ್ರಃ13: ಪ್ರಾ ಸಾ - 10 ದಿಲೀಪ್ ಕುಮಾರ್, ಪಿ ಎಸ್ ಐ ಹೇಳುತ್ತಾರೆ, ದಿನಾಂಕಃ 26.04.2020 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರು ನಿಪಿ-1 ನ್ನು ಸ್ವೀಕರಿಸಿಕೊಂಡು ಠಾಣಾ ಮೊ ಸಂಃ 59/2020 ರೀತ್ಯಾ ಪ್ರ ವ ವರದಿ ದಾಖಲು ಮಾಡಿಕೊಂಡು ಮೇಲಾಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಪ್ರಮಾಪ
ದಂಡಾಪ
Prasanna Kumar

ಉಃಆಃ1:
ಆಃ2:
ಆಃ3:
ಆಃ4:
ಆಃ5:

ಪ್ರಃ14: ಅವರು ಮುಂದುವರಿದು ಹೇಳುತ್ತಾರೆ, ನಂತರ ಅದೇ ದಿನ ಘಟನಾ ಸ್ಥಳಗಳಲ್ಲಿ ಪಂಚರ ಸಮಕ್ಷಮ ನಿಪಿ-2 ಮತ್ತು 4 ರಂತೆ ಮಹಜರ್ ಮಾಡಿ ನಿಪಿ-5 ಮತ್ತು 6 ರಂತೆ ಪೋಟೋ ತೆಗೆದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3:
ಆಃ4:
ಆಃ5:

ಪ್ರಃ15: ಅವರು ಮುಂದುವರಿದು ಹೇಳುತ್ತಾರೆ, ದಿನಾಂಕಃ 04.07.2020 ರಂದು ನೀವು ಆರೋಪಿತರು ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಹಾಜರಾಗಿದ್ದು, 5 ನೇ ಆರೋಪಿಯಾದ ನಿಮ್ಮ ಸ್ವ ಇಚ್ಛಾ ಹೇಳಿಕೆ ಪಡೆದುಕೊಂಡು ನಿಮ್ಮ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3:
ಆಃ4:
ಆಃ5:

ಪ್ರಃ16: ಅವರು ಮುಂದುವರಿದು ಹೇಳುತ್ತಾರೆ, ನಂತರ ಅಗತ್ಯ ದಾಖಲೆಗಳನ್ನು ಕೋರಿ ಸಂಬಂಧಪಟ್ಟವರಿಗೆ ಮನವಿಯನ್ನು ಸಲ್ಲಿಸಿ ಆ ಬಗ್ಗೆ ದಾಖಲೆಗಳನ್ನು ಪಡೆದುಕೊಂಡು ತನಿಖೆ ಪೂರ್ಣಗೊಳಿಸಿ ಆರೋಪಿತರಾದ ನಿಮ್ಮ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3:
ಆಃ4:
ಆಃ5:

Prasannakumar

ಪ್ರಃ17: ಅವರು ಮುಂದುವರಿದು ಹೇಳುತ್ತಾರೆ, ಆರೋಪಿತರಾದ ನಿಮ್ಮನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃಆಃ1:
ಆಃ2:
ಆಃ3:
ಆಃ4:
ಆಃ5:

ಪ್ರಃ18: ನಿಮಗೆ ಈ ಪ್ರಕರಣದ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ?

ಉಃಆಃ1:
ಆಃ2:
ಆಃ3: ಇಲ್ಲ
ಆಃ4:
ಆಃ5:

ಪ್ರದೀಪ್
ಸಂದೀಪ್
Jeevan B
Prasanna Kumar

ಪ್ರಃ19: ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉಃಆಃ1:
ಆಃ2:
ಆಃ3: } ಇಲ್ಲ
ಆಃ4:
ಆಃ5:

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : 4 ನೇ ದಿವಸ ಮಾರ್ಚಿ ಮಾಹೆ 2025.

(ದಾಸರಿ ಕ್ರಾಂತಿ ಕಿರಣ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ನ.ರಾ. ಪುರ.

Prasanna kumar